**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ , ಚನ್ನಗಿರಿ .**

**ಸಿ.ಸಿ. ಸಂಖ್ಯೆಃ 1028/2025**

ಹೆಸರುಃ ಅಪ್ಸರಾ ಬೇಗಂ ಸಿ.ಡಬ್ಲ್ಯೂಃ 1

ವಯಸ್ಸುಃ 29 ವರ್ಷ ಪಿ.ಡಬ್ಲ್ಯೂಃ 5

ಗಂಡಃ ಷಫಿವುಲ್ಲ-

ಉದ್ಯೋಗಃ ಅಬಕಾರಿ ಉಪ ನಿರೀಕ್ಷಕರು

ವಾಸ ಸ್ಥಳ ಹೊನ್ನಾಳಿ

ಸಾಕ್ಷಿಗೆ ದಿನಾಂಕಃ 06.06.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಸಅಅರವರಿಂದ ಮುಖ್ಯ ವಿಚಾರಣೆ

ದಿಃ 30.09.2023 ರಿಂದ ಇಲ್ಲಿಯವರೆಗೆ ನಾನು ಅಬಕಾರಿ ಉಪನಿರೀಕ್ಷಳಾಗಿ ಹೊನ್ನಾಳಿ ಉಪವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿಃ 26.09.2024 ರಂದು ದಾಗಿನಕಟ್ಟೆ ಗ್ರಾಮದಲ್ಲಿ ಗಸ್ತು ಕರ್ವವ್ಯದಲ್ಲಿದ್ದಾಗ ನಾನು ಸಿಬ್ಬಂದಿಗಳ ಜೊತೆ ಗಸ್ತು ನಿರ್ವಹಿಸುತ್ತಿದ್ದಾಗ ಭೂಮೇಶ ಬಿನ್ ರಾಮನಾಯ್ಕ ರವರು ಅಕ್ರಮ ಮದ್ಯವನ್ನು ಸಂಗ್ರಹಿಸಿ ಕಂಚುಗಾರನಹಳ್ಳಿ ಗ್ರಾಮದ ಬಸ್ ನಿಲ್ದಾಣದಲ್ಲಿ ನಿಂತಿದ್ದಾರೆ ಎಂಬ ಖಚಿ ತ ಮಾಹಿತಿ ಬಂದ ಮೇರೆಗೆ ದಾಗಿನ ಕಟ್ಟೆ ಬಸ್ ನಿಲ್ದಾಣದ ಬಳಿ ಇಬ್ಬರು ಪಂಚರನ್ನು ಬರಮಾಡಿಕೊಂಡು ಸದರಿ ವಿಚಾರವನ್ನು ತಿಳಿಸಿ ನಮ್ಮ ಇಲಾಖಾ ಜೀಪ್ ನಲ್ಲಿ ಕಂಚುಗಾರನಹಳ್ಳಿ ಬಳಿ ಬಂದಾಗ ಒಬ್ಬ ಆಸಾಮಿಯು ಬಿಳಿ ಪ್ಲಾಸ್ಟೀಕ್ ಚೀಲವನ್ನು ಹಿಡಿದುಕೊಂಡು ನಿಂತಿದ್ದನು. ಚಾಸಾ 2 ಮತ್ತು 3 ರವರ ಸಮಕ್ಷಮ ವಿಚಾರಿಸಿದಾಗ ಮಾಹಿತಿ ಗೊತ್ತಿದ್ದ ವ್ಯಕ್ತಿಯು ಆತನೇ ಎಂದು ನಮಗೆ ತಿಳಿಸಿರುತ್ತಾರೆ. ಆತನ ಬಳಿ ಹೋಗಿ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ಭೂಮೇಶ ಬಿನ್ ರಾಮನಾಯ್ಕ, 28 ವರ್ಷ, ಯಲ್ಲೋದಹಳ್ಳಿ ಗ್ರಾಮ ಎಂದು ತಿಳಿಸಿದ್ದನು. ನಂತರ ಚೀಲದಲ್ಲಿ ಇರುವುದು ಏನು ಎಂದು ಕೇಳಲಾಗಿ ಆತನು ಗಾಬರಿಗೊಂಡನು. ಸಮಯ ಅಭಾವದ ಕಾರಣ ಶೋದನ ಸಮುಚಿಯ ವನ್ನು ತಯಾರಿಸಿ ಅದರಂತೆ ಚೀಲವನ್ನು ಪರಿಶೀಲಿಸಿ ನೋಡಲಾಗಿ ಹೈವರ್ಡ್ಸ್ ಚಿಯರ್ಸ್ ವಿಸ್ಕಿಯ 90 ಮಿಲಿಯ 96 ಟೆಟ್ರಾ ಪ್ಯಾಕ್ ಗಳು ಕಂಡು ಬಂದಿರುತ್ತವೆ. ನಂತರ ಪಂಚರ ಸಮಕ್ಷಮ ತಲಾ 30 ಟೆಟ್ರಾಪ್ಯಾಕ್ ಗಳನ್ನು ರಾಸಾನಿಯಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ದಾರದಿಂದ ಕಟ್ಟಿ ಇಲಾಖಾ ಸೀಲ್ ನ್ನು ಅರಿಗಿನ ಸಹಾಯದಿಂದ ಹಾಕಿರುತ್ತೇವೆ. ಮಹಜರ್ ನ್ನು ಸಂಜೆ 7.00 ರಿಂದ 8.15 ಗಂಟೆವರೆಗೆ ಜರುಗಿಸಿರುತ್ತಾರೆ. ಸದರಿ ಮಹಜರ್ ನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿಪಿ 1(ಡಿ) ಎಂದು ಗುರುತಿಸಲಾಯಿತು. ನಂತರ ಆರೋಪಿಗೆ ಕಲಂ 35(3) ಬಿ ಎನ್ ಎಸ್ ಎಸ್ ರಡಿಯಲ್ಲಿ ನೋಟಿಸ್ ನ್ನು ಜಾರಿ ಮಾಡಿ

ಸಮಜಾಯಿಷಿ ಉತ್ತರವನ್ನು ಪಡೆದಿರುತ್ತೇನೆ. ಸಾಕ್ಷಿಯು ಮಾದರಿ ಸಹಿ ನಕಲು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಮಾದರಿ ಸಹಿ ನಕಲನ್ನು ನಿಪಿ 12 ಎಂದು, ಸಾಕ್ಷಿ ಸಹಿಯನ್ನು ನಿಪಿ 12(ಎ) ಗುರುತಿಸಲಾಯಿತು. ನಂತರ ಕಚೇರಿಗೆ ಹಾಜರಾಗಿ ಪ್ರ ವ ವರದಿಯನ್ನು ತಯಾರಿಸಿ ಅದನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಅದರ ಪ್ರತಿಯನ್ನು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ಪ್ರ ವ ವರದಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಪ್ರ ವ ವರದಿಯನ್ನು ನಿಪಿ 11 ಎಂದು, ಸಾಕ್ಷಿ ಸಹಿಯನ್ನು ನಿಪಿ 11(ಎ) ಗುರುತಿಸಲಾಯಿತು.

ಆರೋಪಿಯನ್ನು ಹಾಗೂ ಮು. ಮಾ. ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿಯನ್ನು ಹಾಗೂ ಮು.ಮ. ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ಮು.ಮಾ 1 ಎಂದು ಗುರುತಿಸಲಾಗಿರುತ್ತದೆ. ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಚಾಸಾ 7 ರವರಿಗೆ ವರ್ಗಾಯಿಸಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಜಿ ವಕೀಲರಿಂದಃ</u>**

ಆ ದಿನ ಗಸ್ತು ಮಾಡಲು ಸಂಜೆ 6.00 ಗಂಟೆಗೆ ನಮ್ಮ ಇಲಾಖೆಯಿಂದ ಹೊರಟಿರುತ್ತೇವೆ. ಇಲಾಖೆಯನ್ನು ಬಿಟ್ಟ ನಂತರ ಯಾವ ಯಾವ ಊರನ್ನು ಯಾವ ಯಾವ ಸಮಯದಲ್ಲಿ ಗಸ್ತು ಮಾಡಿರುತ್ತೇವೆ ಎಂದು ನನಗೆ ಈಗ ನೆನಪಿಲ್ಲ, ದಾರಿ ಉದ್ದಕ್ಕೂ ಗಸ್ತು ಮಾಡಿಕೊಂಡು ಹೋಗಿರುತ್ತೇವೆಂದು ನುಡಿಯುತ್ತಾರೆ. ಮಾಹಿತಿ ಬಂದಾಗ ನಾವು ದಾಗಿನಕಟ್ಟೆ ಗ್ರಾಮದಲ್ಲಿದ್ದೆವು. ನಾವು ಗಸ್ತು ಮಾಡುತ್ತಿದ್ದ ಇಲಾಖೆ ವಾಹನ ಸಂ. ಕೆಎ 17 ಜಿ 521 ಆಗಿದ್ದು, ನಾನು, ಚಾಸಾ 4 ಮತ್ತು ಚಾಲಕ ಮಂಜುನಾಥ ಗಸ್ತಿನಲ್ಲಿದ್ದೆವು. ಯಲ್ಲೋದಹಳ್ಳಿಯಿಂದ ಕಂಚುಗಾರನಹಳ್ಳಿಗೆ ಸುಮಾರು 3 ಕಿ ಮೀ ಅಂತರವಿದೆ. ನಾನು ಆರೋಪಿಯನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಘಟನಾ ಸ್ಥಳದಲ್ಲಿ ನೋಡಿರುವುದಾಗಿ ನುಡಿಯುತ್ತಾರೆ. ಯಲ್ಲೋದಹಳ್ಳಿಯಲ್ಲಿ ಆರೋಪಿಯ ಮನೆ ಎಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ.

2. ಪಂಚರನ್ನು ಯಾರು ಕರೆದುಕೊಂಡು ಬಂದರು ಎಂಬ ಪ್ರಶ್ನೆಗೆ ಸಾಕ್ಷಿಯು ಪಂಚರು ದಾಗಿನಕಟ್ಟೆ ಗ್ರಾಮದ ಬಸ್ ನಿಲ್ದಾಣದಲ್ಲಿ ಇದ್ದು ಅವರನ್ನು ನಾನೇ ಪಂಚರಾಗಿ ಸಹಕರಿಸಿ ಎಂದು ಕರೆದಿರುತ್ತೇನೆಂದು ನುಡಿಯುತ್ತಾರೆ. ಪಂಚರಾಗಿ ಸಹಕರಿಸಿ ಎಂದು ಪಂಚರಿಗೆ ನಾನು ನೋಟಿಸನ್ನು ನೀಡಿರುತ್ತೇನೆ. ಯಾವ ಕ್ರಮ ಸಂಖ್ಯೆಯ ಟೆಟ್ರಾಪ್ಯಾಕ್ ನ ಮದ್ಯವನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಲಾಯಿತು ಎಂದು ನನಗೀಗ ಗೊತ್ತಿಲ್ಲ. ಮುಮಾ1 ರಂತಹ ವಸ್ತುಗಳು ಎಲ್ಲಾ ಮದ್ಯದ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ಮದ್ಯದಂಗಡಿಯಲ್ಲಿ ಸಿಗುವ ಟೆಟ್ರಾಪ್ಯಾಕ್ ಗಳನ್ನು ಈ ಪ್ರಕರಣಕ್ಕೆ ಅನುಕೂಲವಾಗಲೀ ಎಂದು

ಸೇರಿಸಿರುತ್ತೇವೆ ಎಂದರೆ ಸರಿಯಲ್ಲ, ಆರೋಪಿಗೂ, ಪ್ರಕರಣಕ್ಕೂ, ಮುಮಾಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

3. ಮಹಜರ್ ಕಾಲಕ್ಕೆ ಪೋಟೊಗಳನ್ನು ತೆಗೆದಿರುತ್ತೇವೆ. ನಾವು ಯಾವುದೇ ಗಸ್ತು ಮಾಡುತ್ತಿರಲಿಲ್ಲ ಆರೋಪಿಯು ಯಾವವುದೇ ಮದ್ಯವನ್ನು ಅಕ್ರಮವಾಗಿ ಹೊಂದಿರಲಿಲ್ಲ ಠಾಣಗೆ ಅಂಕಿ ಅಂಶಗಳಿಗಾಗಿ ಆರೋಪಿ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ</u>**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)

**ಓ ಹೇ ಕೆ ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**
**ಚನ್ನಗಿರಿ.**

-